ಶ್ರೀ ಹೆಚ್.ಕೆ.ಪಾಟೀಲ್: ಅದನ್ನು ಟ್ರೈ ಮಾಡುತ್ತೇನೆ. ವಯೇಬಲ್ ಇದೆಯೇ ಎನ್ನುವ ಬಗ್ಗೆ ರೀ-ಕನ್ಸಿಡರ್ ಮಾಡುತ್ತೇವೆ. 80 ಕಿ.ಮೀ. ದೂರವಿದ್ದರೂ ಹುಬ್ಬಳ್ಳಿ-ಧಾರವಾಡಕ್ಕೆ ನೀರು ಕೊರತೆಯಾಗದಂತೆ ಸರ್ಕಾರ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತದೆ.

ಬೆಂಗಳೂರಿನ ರಾಗಿಗುಡ್ಡದ ಹಿಂಭಾಗದ ರಸ್ತೆಯಲ್ಲಿ ನೈರ್ಮಲ್ಯ ಹಾಳಾಗುತ್ತಿರುವುದು.

270(3385)

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ 9ನೇ ಬ್ಲಾಕಿನಲ್ಲಿರುವ ರಾಗಿಗುಡ್ಡ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹಿಂಭಾಗದ ಗೇಟ್ ಬಳಿಯಿರುವ 6ನೇ ಎ ಮುಖ್ಯ ರಸ್ತೆಯಲ್ಲಿ ಸುತ್ತ ಮುತ್ತಲಿನ ಗುಡಿಸಲು ನಿವಾಸಿಗಳು ಮಲಮೂತ್ರ ವಿಸರ್ಜನೆ ಮಾಡಿ ನೈರ್ಮಲ್ಯವನ್ನು ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಭಾಗದಲ್ಲಿ ನೈರ್ಮಲ್ಯವನ್ನು ಕಾಪಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಪದರಿ ರಸ್ತೆಗೆ ಡಾಂಬರೀಕರಣ, ಸೋಡಿಯಂ ವೇಪರ್ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಮಾಡಿ ದೇವಸ್ಥಾನಕ್ಕೆ ಬರತಕ್ಕ ವಾಹನಗಳ ನಿಲುಗಡೆಗೆ ಅವಕಾಶ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಹೌದು

ಆ) ಈಗಾಗಲೇ ಒನೇ 'ಎ' ಮುಖ್ಯರಸ್ತೆಯಲ್ಲಿ ಇದ್ದ ಮಣ್ಣು, ಕಲ್ಲುಗಳನ್ನು ಹೊರ ಸಾಗಿಸಲಾಗಿರುತ್ತದೆ ಹಾಗೂ ಈ ಪ್ರದೇಶದ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಲು ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಇ) ಹೌದು. ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ: ಜಯನಗರ 9ನೇ ಬ್ಲಾಕ್‌ನಲ್ಲಿರುವ ರಾಗಿಗುಡ್ಡದಲ್ಲಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನವಿದ್ದು, ಅಲ್ಲಿಗೆ ಪ್ರತಿದಿನ ಸಾವಿರಾರು ಭಕ್ತಾದಿಗಳು ಬರುತ್ತಿದ್ದಾರೆ. ಅಲ್ಲಿ ಸೋಡಿಯಂ ವೇಪರ್ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಬೇಕು

ಮತ್ತು ರಸ್ತೆಗೆ ಟಾರ್ ಹಾಕಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಈ ಪ್ರಶ್ನೆ ಮುಖ್ಯಮಂತ್ರಿಗಳ ವ್ಯಾಪ್ತಿಗೆ ಬರುವುದರಿಂದ, ಅವರು ಹೇಳಿರುವ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನೂ ಕೂಡ ಪ್ರಯತ್ನಿಸುತ್ತೇನೆ.

ಹಾಸನ ಜಿಲ್ಲೆಯ ಶಾಂತಿ ಗ್ರಾಮಕ್ಕೆ 30 ಹಾಸಿಗೆಗಳ ಆಸ್ಪತ್ರೆ ಮಂಜೂರಾತಿ.

285(2925)

ಶ್ರೀ ಹನುಮೇಗೌಡ ಕೆ.ಹೆಚ್.(ಹಾಸನ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಕಳೆದ ಏಳು ವರ್ಷಗಳ ಹಿಂದೆ ಹಾಸನ ಪಧಾನ ಸಭಾ ಕ್ಷೇತ್ರದ ಶಾಂತಿಗ್ರಾಮಕ್ಕೆ 30 ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಿದ್ದು ನಿಜವಲ್ಲವೆ;

ಆ) ಅನಂತರ ಬಂದ ಸರ್ಕಾರ ಈ ಆಸ್ಪತ್ರೆಯನ್ನು ರದ್ದುಪಡಿಸಿ ಹೊಳೇನರಸೀಪುರದ ಕಂಚೇವು ಸ್ಥಳಕ್ಕೆ ಏನಾಕಾರಣ ಸ್ಥಳಾಂತರಿಸಿದ್ದು ನಿಜವಲ್ಲವೆ;

ಇ) ಶಾಂತಿಗ್ರಾಮದ ಸುತ್ತಮುತ್ತ ಸುಮಾರು 15 ಕಿ.ಮೀ. ಮೇಲ್ಪಟ್ಟು ಯಾವ ಆಸ್ಪತ್ರೆಯು ಇಲ್ಲದಿರುವುದರಿಂದ ಸುತ್ತಮುತ್ತ ಬಡರೋಗಿಗಳ ಹಿತದೃಷ್ಟಿಯಿಂದ ಸರ್ಕಾರ 30 ಹಾಸಿಗೆಗಳ ಆಸ್ಪತ್ರೆಯನ್ನು ತಕ್ಷಣ ಮಂಜೂರು ಮಾಡುವುದೆ? (ಏವರ ನೀಡುವುದು)

ಡಾ:ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಂಚೇವು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿದೆ.

ಇ) 30 ಹಾಸಿಗೆಗಳ ಆಸ್ಪತ್ರೆಯ ಮಂಜೂರಾತಿಗೆ ಅವಶ್ಯಕವಾದ ಜನಸಂಖ್ಯೆ ಮತ್ತು ಅನುದಾನದ ಲಭ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ನಾನು ಆ ಕಡೆ ಕುಳಿತಿದ್ದೆ. ರಾಮಲಿಂಗಾರೆಡ್ಡಿಯವರು ಆರೋಗ್ಯ ಸಚಿವರಾಗಿದ್ದರು. ಶಾಂತಿ ಗ್ರಾಮದ ಸುತ್ತ ಮುತ್ತ 15 ಕಿ.ಮೀ. ವ್ಯಾಪ್ತಿಯಲ್ಲಿ ಒಂದೂ ಆಸ್ಪತ್ರೆಯಿಲ್ಲದೆ. ಅದು ಬೆಂಗಾಡು